

# ಪುಟ್ಟ ಹಾಡುಗಾರ ನೆಲಸಿಳ್ಳಾರ

■ ಶೈಲಜಾ ಚಂದ್ರಶೇಖರ

ಒಂದು ಹೆಜ್ಜೆ.... ಎರಡು ಹೆಜ್ಜೆ.... ಮೂರು! ನನ್ನ ಮಗಳು ಕ್ಯಾಮರಾ ಹಿಡಿದು ಮೆಲ್ಲ ಮೆಲ್ಲನೆ ಹತ್ತಿರ ಹೋದರೂ ಮೊಣಕಾಲುದ್ದ ನೀರಲ್ಲಿ ನಿಂತು ಸ್ನಾನ ಮಾಡಲು ಸಜ್ಜಾಗಿದ್ದ ಹಕ್ಕಿ ಅಲ್ಲಾಡಲೇ ಇಲ್ಲ! ಬಿಡುಗಣ್ಣಿನಿಂದ ಅವಳನ್ನೇ ದಿಟ್ಟಿಸುತ್ತ ಮುಂದೇನು ಎಂಬಂತೆ ನೋಡುತ್ತಿತ್ತು. ಯಾವಾಗಲೂ ನೋಡಿದೊಡನೆ ಹಾರಿ ಮರೆಯಾಗುತ್ತಿದ್ದ ಆ ಹಕ್ಕಿಯ ಫೋಟೋ ತೆಗೆದ ಅವಳಿಗೆ ಖುಷಿಯೋ ಖುಷಿ. ಅಂತೂ ಇಂತೂ ಕ್ಯಾಮರಾದ ಕಣ್ಣಿನಿಂದ ಬಿಡುಗಡೆಯಾದ ಆ ಅವಸರದಲ್ಲಿ ಹಕ್ಕಿ ವಿರಾಮವಾಗಿ ಸ್ನಾನ ಮಾಡದೇ ಬೇಗ ಬೇಗ ಮುಳುಗು ಹಾಕಿ ಹಾರಿ ಮರದ ಮೇಲೆ ಕುಳಿತು ಪುಕ್ಕ ನೀವಿಕೊಳ್ಳತೊಡಗಿತು.

ಆ ಹಕ್ಕಿಯ ಹೆಸರೇನೆಂದು ಸಮೀಪದಲ್ಲಿ ದನ ಮೇಯಿಸುತ್ತಿದ್ದ ಕಾಳನನ್ನು ಕೇಳಿದೆ. 'ಯಾರಿಗೆ ಗೊತ್ತಮ್ಮ, ಹಿಡಿದ್ರೆ ತಿನ್ನಾಕೆ ಒಂದು ಪಿಡಿಚೆ ಮಾಂಸಾನೂ ಸಿಗಾಕಿಲ್ಲ' ಎಂದು ಬಿಟ್ಟ! 'ಆದ್ರೆ ಚೆನ್ನಾಗಿ ಹಾಡ್ತೈತಿ ನೋಡಿ' ಎಂದು ಮಾಹಿತಿಯನ್ನು ಕೊಟ್ಟ. ಸದಾ ಮೌನವಾಗಿ ಕಂಡು ಬರುವ ಈ ಹಕ್ಕಿ ಹಾಡುತ್ತದೆ ಎಂದರೆ ನಂಬಲೇ ಆಗಲಿಲ್ಲ.

ಕನ್ನಡದಲ್ಲಿ ನೆಲಸಿಳ್ಳಾರ ಎಂದು ಕರೆವ ಈ ಹಕ್ಕಿಯ ಇಂಗ್ಲಿಷ್ ಹೆಸರು ಆರೆಂಜ್ ಹೆಡ್ಡೆಡ್ ಗ್ರೌಂಡ್ ತ್ರಶ್. ಶಾಸ್ತ್ರೀಯ ನಾಮಧೇಯ ಝೂತೆರ ಸಿಟ್ರಿನ ಸಯನೊಟಸ್. ಗಂಡು ಹಕ್ಕಿಗೆ ಹಳದಿ ಬಣ್ಣದ ತಲೆ ಮತ್ತು ಮೈಯಿದ್ದು ನೀಲಿ ಬೂದು ರೆಕ್ಕೆಗಳಿವೆ. ಕೆನ್ನೆ ಹಾಗೂ ಕುತ್ತಿಗೆ ಬಿಳಿ ಬಣ್ಣವಿದ್ದು ಕಪ್ಪು ಪಟ್ಟಿಗಳನ್ನು ಕಾಣಬಹುದು. ಹೆಣ್ಣು ಹಕ್ಕಿಗೆ ನೀಲಿ ಬೂದು ಬಣ್ಣದ ಬದಲು ಹಸಿರು ಮಿಶ್ರಿತ ಬೂದು ಬಣ್ಣದ ರೆಕ್ಕೆಗಳಿವೆ. ಮರಿಹಕ್ಕಿಗಳ ಎದೆ ಹಾಗು ಕೆಳ ಮೈಮೇಲೆ ಬೂದು ಬಣ್ಣದ ಗೀರುಗಳಿದ್ದು ಅವು ದೊಡ್ಡ ಹಕ್ಕಿಗಳಿಂದ ಬೇರೆಯಾಗಿ ತೋರುತ್ತವೆ.

ದಕ್ಷಿಣ ಭಾರತದಲ್ಲಿ ಸಾಧಾರಣ ಕಾಡಿನ ತಂಪಾದ ಭಾಗಗಳಲ್ಲಿ, ನೀರಿರುವ ಎಡೆಗಳಲ್ಲಿ ಓಡಾಡುತ್ತಾ ಹುಳು ಹುಪ್ಪಟೆಗಳನ್ನು ಕುಕ್ಕಿ ತಿನ್ನುವ, ಬಿದ್ದ ಹಣ್ಣುಗಳನ್ನು ತಿನ್ನುವ ಈ ಹಕ್ಕಿ ಆಹಾರ ಹುಡುಕಿಕೊಂಡು ಗುಂಪಿನಲ್ಲಿ ಸಂಚರಿಸುವ ವಿವಿಧ ಜಾತಿಯ ಹಕ್ಕಿಗಳೊಂದಿಗೆ ಸೇರುವುವಾದರೂ ಅವರಂತೆ ಗಲಾಟೆ ಮಾಡದೇ ಸ್ವಲ್ಪ ದೂರದಲ್ಲಿ ಇದ್ದು ಅವರ ಚಟುವಟಿಕೆಗಳನ್ನು ವೀಕ್ಷಿಸುತ್ತದೆ. ಅವರ ಗದ್ದಲದ ಸ್ನಾನ ಮುಗಿದ ಮೇಲೆ ತಾನು ಸ್ನಾನಕ್ಕಿಳಿಯುತ್ತದೆ. ಸೆಖೆಯೇರಿದ ಕಾಲದಲ್ಲಿ ಮೂರು ಹೊತ್ತು ಸ್ನಾನ ಮಾಡುವ ಪಕ್ಷಿಯಿದು. ಸಂತಾನ ಋತುವಿನ ಸಮಯದಲ್ಲಿ ಗಂಡು ಹಕ್ಕಿ ಸುಶ್ರಾವ್ಯವಾಗಿ ಸಿಳ್ಳು ಹಾಕಿದಂತೆ ಹಾಡುತ್ತದೆ. ಅದರಲ್ಲಿ ಇತರ ಹಕ್ಕಿಗಳ ಸ್ವರಗಳನ್ನು ಸಹ ಸೇರಿಸಿಕೊಳ್ಳುತ್ತದೆ.

ಮೇ–ಜೂನ್ ಸಮಯದಲ್ಲಿ ಒದ್ದೆ ಮಣ್ಣಿಗೆ ಬೇರು, ಹುಲ್ಲು ಇತ್ಯಾದಿಗಳನ್ನು ಸೇರಿಸಿ ಬಟ್ಟಲಿನಾಕಾರದ ಗೂಡನ್ನು ಮರದ ಮೇಲೆ ಕಟ್ಟುತ್ತದೆ. ತಿಳಿ ನೀಲಿ ಬಣ್ಣದ ಮೊಟ್ಟೆಗಳ ಮೇಲೆ ಕೆಂಪು ಗೀರುಗಳಿರುತ್ತವೆ.



